**ಸಾಕ್ಷಿಯನ್ನು ದಿನಾಂಕ: 09.12.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ SSV ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕನ್ನಡ ಮಾದ್ಯಮದಲ್ಲಿ ಶಾಲೆಯನ್ನು ಕಲೆತಿರುತ್ತೇನೆ. ಈ ದಾವೆಯ ಕುರಿತು ಸಂಪೂರ್ಣ ಮಾಹಿತಿ ಇರುತ್ತದೆ. ಈ ದಾವೆಯನ್ನು ಹೂಡಲು ಮಾಹಿತಿಯನ್ನು ನಾನು ಮತ್ತು ನಮ್ಮ ಅಣ್ಣ ಸೇರಿ ಕೊಟ್ಟಿರುತ್ತೇವೆ. ಈ ದಾವೆಯ ವಾದ ಪತ್ರವನ್ನು ನಾನು ಓದಿರುತ್ತೇನೆ ಹಾಗೂ ಅದರಲ್ಲಿರುವ ಸಂಗತಿಗಳು ನಿಜವಿರುತ್ತವೆ. ಈ ದಾವೆಯಲ್ಲಿ 8 ಅಥವಾ 9 ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಸದರಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಗಳು ಯಾವ ಯಾವ ದಾಖಲೆಗಳು ಇರುತ್ತವೆ ಎಂದು ನನಗೆ ಈಗ ನೆನಪಿಲ್ಲ.

ನಮ್ಮ ತಂದೆಗೆ ನಾವು ಒಟ್ಟು ಇಬ್ಬರು ಗಂಡು ಮಕ್ಕಳು ಅದರಲ್ಲಿ ನಾನು ಚಿಕ್ಕವನು ಹಾಗೂ ನಮ್ಮ ಅಣ್ಣ ಇರುತ್ತಾನೆ. ನಮ್ಮ ಅಣ್ಣ ಈ ದಾವೆಯಲ್ಲಿ ವಾದಿ ನಂ. 1 ಹಾಗೂ ನಾನು 2ನೇ ವಾದಿ ಎಂದರೆ ನಿಜ. ಈ ದಾವೆಯಲ್ಲಿ 1ನೇ ವಾದಿಯು ಸಾಕ್ಷ್ಯವನ್ನು ನುಡಿದಿರುವುದಿಲ್ಲ. 1ನೇ ವಾದಿಯು ಯಾವ ಕಾರಣಕ್ಕೆ ಸಾಕ್ಷ್ಯ ಹೇಳಿರುವುದಿಲ್ಲ ಎಂದು ನನಗೆ ಗೊತ್ತಿಲ್ಲ. 1ನೇ ವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ನನಗೆ ಯಾವುದೇ ಅಧಿಕಾರವನ್ನು ಕೊಟ್ಟಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1ನೇ ವಾದಿಯ ಪರವಾಗಿ ಸಹ ನಾನೇ ಸಾಕ್ಷ ಹೇಳುತ್ತಿದ್ದೇನೆ ಎಂದು ಬರೆಯಿಸಿರುತ್ತೇನೆ. 1ನೇ ವಾದಿಯು ತನ್ನ ಪರವಾಗಿ ಸಾಕ್ಷ್ಯ ನುಡಿಯಲು ನನಗೆ ಹೇಳಿರುವುದಿಲ್ಲ.

ನನ್ನ ತಂದೆಯ ತಂದೆ ಹೆಸರು ಶಿವನಪ್ಪ ಎಂದರೆ ನಿಜ. ಸದರಿ ಶಿವನಪ್ಪನ ಹೆಂಡತಿಯ ಹೆಸರು ಬಸನಿಂಗವ್ವ ಎಂದರೆ ನಿಜ. ಸದರಿ ಶಿವನಪ್ಪ ಹಾಗೂ ಬಸನಿಂಗವ್ವ ಮರಣ ಹೊಂದಿರುತ್ತಾರೆ ಎಂದರೆ ನಿಜ. ಸದರಿಯವರಿಗೆ ಒಟ್ಟು 4 ಜನ ಮಕ್ಕಳು ಅವುರುಗಳಲ್ಲಿ 2 ಜನ ಹೆಣ್ಣು ಮಕ್ಕಳು ಹಾಗೂ 2 ಜನ ಗಂಡು ಮಕ್ಕಳು ಎಂದರೆ ನಿಜ. ಗಂಡು ಮಕ್ಕಳು ಹೆಸರು ಕಲ್ಲಪ್ಪ ಹಾಗೂ ನನ್ನ ತಂದೆ

ಮಹಾಬಳೇಶ್ವರ ಎಂದರೆ ನಿಜ.  2ನೇ ಪ್ರತಿವಾದಿ ಕಲ್ಲಪ್ಪ ನನ್ನ ದೊಡ್ಡಪ್ಪ ಎಂದರೆ ನಿಜ. 1ನೇ ಪ್ರತಿವಾದಿಯು ನನ್ನ ತಂದೆ ಎಂದರೆ ನಿಜ. ಅದೇ ರೀತಿ ಹೆಣ್ಣು ಮಕ್ಕಳು ಹೆಸರು ಚೆಂಬವ್ವ ಮತ್ತು ಶಿವವ್ವ ಎಂದರೆ ನಿಜ. ಸದರಿಯವರನ್ನು ಸಹ ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೇವೆ ಎಂದರೆ ನಿಜ.

ಈ ದಾವೆಯಲ್ಲಿ 8-9 ಆಸ್ತಿಗಳು ಇರುತ್ತವೆ. ಸದರಿ ಆಸ್ತಿಗಳು ಕಿತ್ತೂರ ಮತ್ತು ಅವರಾದಿಯಲ್ಲಿರುತ್ತವೆ. ಅವರಾದಿಯಲ್ಲಿ 2 ಆಸ್ತಿಗಳು ಹಾಗೂ ಕಿತ್ತೂರಿನಲ್ಲಿ 7 ಆಸ್ತಿಗಳು ಇರುತ್ತವೆ. ಕಿತ್ತೂರಿನಲ್ಲಿರುವ ಆಸ್ತಿಗಳ ಸರ್ವೆ ನಂಬರ ನನಗೆ ಈಗ ನೆನಪಿಲ್ಲ. ಕಿತ್ತೂರಿನಲ್ಲಿ ಒಟ್ಟು ಎಷ್ಟು ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು 7-8 ಎಕರೆ ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಅವರಾದಿಯಲ್ಲಿರುವ ಆಸ್ತಿಗಳ ನಂಬರ ನನಗೆ ನೆನಪಿಲ್ಲ. ಸದರಿ ಆಸ್ತಿಯು ಒಟ್ಟು 3 ಎಕರೆ 07 ಗುಂಟೆ ಆಸ್ತಿ ಇರುತ್ತದೆ. ಎಲ್ಲವು ಸೇರಿದರೆ ಒಟ್ಟು ಸುಮಾರು 11 ಎಕರೆ ಆಸ್ತಿ ಇರುತ್ತದೆ ಎಂದರೆ ನಿಜ. ಸದರಿ ಆಸ್ತಿಯ ಕುರಿತು ಉತಾರಗಳನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಆಸ್ತಿಗಳನ್ನು ನೋಡಿರುತ್ತೇನೆ. ದಾವಾ ಆಸ್ತಿಗಳ ಚಕಬಂದಿ ನನಗೆ ಗೊತ್ತಿರುವುದಿಲ್ಲ.

ನಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗಳ ಚೆಕಬಂದಿಯನ್ನು ಬರೆಯಿಸಿರುತ್ತೇವೆ ಆದರೆ ನನಗೆ ಈಗ ನೆನಪಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮಗೆ ಸಂಬಂಧಿಸಿದ ಒಂದು ಮನೆ ಮತ್ತು ಒಂದು ಖುಲ್ಲಾ ಜಾಗ ಇರುತ್ತದೆ. ಸದರಿ ಮನೆ ಹಾಗೂ ಖುಲ್ಲಾ ಜಾಗ ಎತ್ತಿನಕೇರಿ ಗ್ರಾಮದಲ್ಲಿರುತ್ತದೆ. ಸದರಿ ಮನೆ ನಂ. 153 ಇರುತ್ತದೆ ಹಾಗೂ ಖುಲ್ಲಾ ಜಾಗೆಯ ಆಸ್ತಿ ನಂಬರ ನನಗೆ ಗೊತ್ತಿಲ್ಲ. ಸದರಿ ಮನೆಯು ಕರಿಹಂಚಿನ ಮನೆಯಾಗಿರುತ್ತದೆ. ಸದರಿ ಮನೆಯ ಅಳತೆ ನನಗೆ ನೆನಪಿಲ್ಲ. ವಾದ ಪತ್ರದಲ್ಲಿ ಸದರಿ ಮನೆಯ ಅಳತೆಯನ್ನು ಹೇಳಿರುವ ನೆನಪು ನನಗೆ ಈಗ ಇರುವುದಿಲ್ಲ. ಖುಲ್ಲಾ ಜಾಗೆಯ ಅಳತೆ ಎಷ್ಟು ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ 95 ಪೂಟ್ ಹಾಗೂ ದಕ್ಷಿಣೊತ್ತರ 89 ಪೂಟ್ ಇರುತ್ತದೆ. ಸದರಿ ಮನೆ ಹಾಗೂ ಖುಲ್ಲಾ ಜಾಗೆಯ ಚಕಬಂದಿ ನನಗೆ ನೆನಪಿಲ್ಲ. ವಾದ ಪತ್ರದಲ್ಲಿ ಚಕಬಂದಿಯನ್ನು ಬರೆಯಿಸಿರುತ್ತೇವೆ. ದಾವಾ ಆಸ್ತಿಗಳ ಚಕಬಂದಿಯನ್ನು ಹೇಗೆ ಬರೆಯಿಸಿರುತ್ತೀರಿ ಎಂದರೆ ಸಾಕ್ಷಿಯು ಜನರಿಗೆ ಕೇಳಿ

ತಿಳಿದುಕೊಂಡು ಬರೆಯಿಸಿರುತ್ತೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಚಕಬಂದಿಯ ಕುರಿತು ನನಗೆ ಸ್ವಂತಕ್ಕೆ ಮಾಹಿತಿ ಇರಲಿಲ್ಲ.

ಕಿತ್ತೂರಿಗೆ ಹತ್ತಿರ ಇರುವ ನಮ್ಮ ಜಮೀನು ಈಗ ಒಂದು ಎಕರೆಯ ಜಮೀನು 25 ಲಕ್ಷ ಮೇಲ್ಪಟ್ಟ ಬೆಲೆ ಬಾಳುತ್ತದೆ ಎಂದರೆ ನಿಜ. ಹೀಗಾಗಿ ದಾವಾ ಆಸ್ತಿಗಳ ಒಟ್ಟು ಮೌಲ್ಯ 2 ಕೊಟಿ 25 ಲಕ್ಷ ಆಗುತ್ತದೆ ಎಂದರೆ ನಿಜ. ಅಲ್ಲದೇ ನಮ್ಮ ಮನೆ ಹಾಗೂ ಖುಲ್ಲಾ ಜಾಗ ಸೇರಿ ಸುಮಾರು 30 ಲಕ್ಷ ಬೆಲೆ ಬಾಳುತ್ತದೆ ಎಂದರೆ ನಿಜ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**